# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : ೧೭-೧-೨೦೨೧

### ಸದನ ಸಮಿತಿ ರಚನೆ ಏಕಪಕ್ಷೀಯ ತೀರ್ಮಾನ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಡಿ.15ರಂದು ನಡೆದ ಗಲಾಟೆ ತನಿಖೆಗಾಗಿ ರಚಿಸಿರುವ ಸದನ ಸಮಿತಿ, ಸಭಾಪತಿ ಏಕಪಕ್ಷೀಯ ತೀರ್ಮಾನ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಟೀಕಿಸಿದ್ದಾರೆ. ಪಕ್ಷದ ರಾಜ್ಯ ಕಚೇರಿ ಶನಿವಾರ ಮಾತನಾಡಿದ ಅವರು, ನಿಯಮದ ಪ್ರಕಾರ ಸದನದಲ್ಲೇ ಚರ್ಚಿಸಿ, 3 ಪಕ್ಷಗಳ ಒಪ್ಪಿಗೆ ಪಡೆದು ಸಮಿತಿ ರಚಿಸಿ ನಿಷ್ಪಕ್ಷಪಾತ ತನಿಖೆಗೆ ಅವಕಾಶ ಮಾಡಿಕೊಡಬೇಕಾಗಿತ್ತು. ಅಲ್ಲದೆ, ಸಮಿತಿಗೆ ಅಧ್ಯಕ್ಷರಾಗಿರುವ ಮರಿತಿಬ್ಬೇಗೌಡ ಈಗ ಕಾಂಗ್ರೆಸ್‌ನಲ್ಲಿದ್ದಾರೋ, ಜೆಡಿಎಸ್‌ನಲ್ಲಿದ್ದಾರೋ ಗೊತ್ತಿಲ್ಲ. ಗಲಾಟೆ ನಡೆದ ದಿನವೂ ಅವರು ಹಾಜರಿದ್ದರು. ಅಂತಹವರಿಂದ ನಿಷ್ಪಕ್ಷಪಾತ ತನಿಖೆ ನಿರೀಕ್ಷಿಸುವುದು ಸಾಧ್ಯವಿಲ್ಲ. ಗಲಾಟೆಗೆ ಪ್ರಚೋದಿಸಿದ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ ಸಮಿತಿ ಸದಸ್ಯರಾಗಿರುವುದು ವಿಪರ್ಯಾಸ. ಸದನ ಸಮಿತಿ ರಚನೆಯ ನಿರ್ಧಾರವನ್ನು ಪುನರ್ ಪರಿಶೀಲಿಸಬೇಕು ಎಂದು ಸಭಾಪತಿಗೆ ಒತ್ತಾಯಿಸಿದರು.

